ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 5, November-December 2022, Pp. 13- 16
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಗಂಗಮ್ಮನ ಬೋರ್ ಪ್ರಕರಣ  ಒಂದು ಲಲಿತ ಪ್ರಬಂಧ

**ವಿನೋದ ಕುಮಾರ ಭದ್ರಪ್ಪ***
*ಸಂಶೋಧನಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***Abstract:***
*ಕನ್ನಡ ಸಾಹಿತ್ಯಕ್ಕೆ ಲಲಿತ ಪ್ರಬಂಧವು ಪಾಶ್ಚಾತ್ಯ ಸಾಹಿತ್ಯದ ಮೂಲದಿಂದ ಬಂದಿದೆ. ಲಲಿತ ಪ್ರಬಂಧವು ಕನ್ನಡ ಸಾಹಿತ್ಯ ಮತ್ತು ಕನ್ನಡ ಭಾಷೆಯ ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆ ಕೊಡುತ್ತಾ ಬಂದಿದೆ. ಗದ್ಯಕ್ಕೆ ಸಹಜತನ ಆಡುಭಾಷೆಯ ಸಾಮೀಪ್ಯ, ಬಳುಕು, ಲವಲವಿಕೆ ಬಂದದ್ದು ಬಹುಮಟ್ಟಿಗೆ ಲಲಿತ ಪ್ರಬಂಧಗಳಿಂದ. ಅದೇ ರೀತಿಯಾಗಿ ಕಲ್ಯಾಣ ಕರ್ನಾಟಕ ಸಾಹಿತ್ಯ ಕ್ಷೇತ್ರಕ್ಕೆ ತನ್ನದೆ ಆದ ಕೊಡುಗೆಯನ್ನು ನಿಡುತ್ತಾ ಬಂದಿದ್ದು ಕನ್ನಡ ಸಾಹಿತ್ಯ ಉತ್ತುಂಗ ಶಿಖರಕ್ಕೇರಲು ಈ ಭಾಗದ ಹಲವಾರು ಸಾಹಿತಿಗಳು ಕವಿಗಳು ನಿರಂತರ ಶ್ರಮಿಸಿದ್ದಾರೆ ಈಗಲೂ ಶ್ರಮಿಸುತ್ತಿದ್ದಾರೆ. ಅಂತಹ ಕವಿಗಳಲ್ಲಿ ಡಾ. ಬಿ. ಬಿ ಪೂಜಾರಿಯವರು ಕೂಡಾ ಒಬ್ಬರಾಗಿದ್ದು ಪ್ರಸ್ತುತ ಗಂಗಮ್ಮನ ಬೋರ್ ಪ್ರಕರಣದಲ್ಲಿ ಸುಮಾರು ಹನ್ನೊಂದು ಹಾಸ್ಯ ಕಥನಗಳನ್ನು ರಚಿಸಿ ಓದುಗರ ಕೈಗೆ ನೀಡಿದ್ದಾರೆ. ಈ ಪ್ರಬಂಧದಲ್ಲಿನ ಎರಡು ಹಾಸ್ಯ ಕಥೆಗಳನ್ನು ಆಯ್ಕೆ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಲಲಿತ ಪ್ರಬಂಧ, ಬೋರಮ್ಮ, ಬೋರವೆಲ್, ಗ್ರಾಮೀಣ ಬದುಕು.*

## ಪೀಠಿಕೆ

'ಗಂಗಮ್ಮನ ಬೋರ್ ಪ್ರಕರಣ' ಇದೊಂದು ಲಲಿತ ಪ್ರಬಂಧದವಾಗಿದ್ದು,  ಗಂಗಮ್ಮ ಎನ್ನುವ ಅಜ್ಜಿಯದು ಈ ಕಥೆಯಲ್ಲಿ ಪ್ರಮುಖ ಪಾತ್ರ. ಗಂಗಮ್ಮ ಸಾವಿರಾರು ರೂಪಾಯಿ ಖರ್ಚುಮಾಡಿ ಬಾವಿ ತೋಡಿಸಿದ್ದರೂ ಕೂಡ ನೀರು ಸಿಗದೆ ಚಿಂತಕ್ರಾಂತಳಾಗಿದ್ದಳು. ಆದರೆ ಅವಳ ಮಗ ಧೈರ್ಯಮಾಡಿ ಬೋರ್‌ವೆಲ್ ಹಾಕಿಸುತ್ತಾನೆ. ಆ ಬೋರ್‌ವೆಲ್‌ನಲ್ಲಿ ಮೂರಿಂಚು ನೀರು ಬಂದಿರುವುದು ತಿಳಿದು ಅಪಾರವಾದ ಸಂತೋಷದಿಂದ ತನ್ನ ಅಕ್ಕಪಕ್ಕದ ಮನೆಯವರೊಂದಿಗೆ ವಿಷಯವನ್ನು ಹಂಚಿಕೊಳ್ಳುತ್ತಾಳೆ.  ಅಷ್ಟರಲ್ಲಿ ಅಲ್ಲಿಗೆ ಆಗಮಿಸಿದ ಪೂಜಾರಿಯೊಬ್ಬ ಗಂಗಾದೇವಿ ನಿಮಗೆ ಒಲಿದಿದ್ದು, ಗಂಗಾದೇವಿಯನ್ನು ಪೂಜಿಸಬೇಕೆಂದು ಹೇಳುತ್ತಾನೆ. ಇದ ಕೇಳಿದ ಗಂಗಮ್ಮ ಪೂಜಿಸದಿದ್ದರೆ ನೀರು ಬೇರೆಡೆಗೆ ಹರಿದಿತು ಎಂಬ ಆತಂಕದಿಂದ ಯಾವ ರೀತಿಯ ಪೂಜೆ ಮಾಡಬೇಕು ಎಂದು ಕೇಳುತ್ತಾಳೆ. ನಂತರ ಪೂಜೆಗೆ ಬೇಕಾದ ಸಾಮಗ್ರಿಗಳ ಬಗ್ಗೆ ತಿಳಿದುಕೊಂಡು ಮನಸ್ಸಿನಲ್ಲಿಯೇ ಹಲವಾರು ವಿಚಾರಗಳನ್ನು ಮೆಲಕು ಹಾಕುತ್ತಾಳೆ.

ಗಂಗಾದೇವಿಯನ್ನು ಪೂಜಿಸಲು ಗಂಗೆ ಬೇಕು ಆದರೆ ಅದೇ ದಿನ ಬೋರ್‌ವೆಲ್ ಹಾಕಿದ್ದರಿಂದ ನೀರೆತ್ತಲು ಮೋಟಾರ್ ಆಗಲಿ ಅಥವ ವಿದ್ಯುತ್ ಆಗಲಿ ಇರಲಿಲ್ಲ. ಬೋರ್ ಹೊಡೆದದ್ದು ಇದೇ ದಿನವಾದ್ದರಿಂದ ಅದರಲ್ಲಿ ನೀರೆನೋ ಇದೇ ಅದಕ್ಕೆ ಯಂತ್ರ ಕೂಡಿಸಿಲ್ಲ ಕೊಳವೆ ಕೂಡಿಸಿಲ್ಲ ನೀರು

***Please cite this article as:*** ವಿನೋದ ಕುಮಾರ ಭದ್ರಪ್ಪ. (2022). ಗಂಗಮ್ಮನ ಬೋರ್ ಪ್ರಕರಣ  ಒಂದು ಲಲಿತ ಪ್ರಬಂಧ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(5), 13–16.

ಎತ್ತುವುದು ಹೇಗೆ? ಗಂಗಮ್ಮನಿಗೆ ದೊಡ್ಡ ಚಿಂತೆಬಿತ್ತು. ಹೇಗಾದರೂ ಮಾಡಿ ಇಂದೇ ಬೋರ್‌ನಿಂದ ನೀರು ಎತ್ತಬೇಕು! ಯಾವ ಇಂಜಿನಿಯರ್‌ಗೂ ಹೊಳೆಯದ ವಿಚಾರ ಗಂಗಮ್ಮನಿಗೆ ಹೊಳೆದು ಮಗ ಸೊಸೆ ದೇವರ ಗುಡಿಗೆ ಹೋಗಿರುವುದನ್ನು ಕಂಡು ತುಂಬಾ ಕುತೂಹಲದಿಂದ ಹೇಗಾದರೂ ಮಾಡಿ ಬೋರ್‌ವೆಲ್‌ನಿಂದ ನೀರನ್ನು ಹೊರತೆಗೆದು ಗಂಗಾದೇವಿಯ ದರ್ಶನ ಪಡೆಯಬೇಕೆಂಬುದು ಗಂಗಮ್ಮನ ಬಯಕೆ ಅದಕ್ಕಾಗಿ ಅವಳು ಮನೆಯಲ್ಲಿರುವ ಸುತಾಳಿಯಿಂದ ತಂಬಿಗೆಯನ್ನು ಕಟ್ಟಿ ಬೋರ್‌ವೆಲ್‌ಗೆ ಬಿಡುತ್ತಾಳೆ. ಆದರೆ ತಂಬಿಗೆಯನ್ನು ಒಳಬಿಟ್ಟು ಮೇಲುತ್ತುವಾಗ ಆಳದಲ್ಲಿ ಸಿಕ್ಕಿಕೊಳ್ಳುತ್ತದೆ. ಇದರಿಂದ ಚಿಂತಾಕ್ರಾಂತಳಾದ ಗಂಗಮ್ಮ ಹಲವಾರು ಜನರ ಸಲಹೆ ಕೇಳಿದಾಗ ಪ್ರತಿಯೊಬ್ಬರು ಒಂದೊಂದು ಸಲಹೆ ಕೊಡುತ್ತಾರೆ. ಅದರಲ್ಲಿ ಪ್ರಮುಖವಾಗಿ ಒಬ್ಬ ಶಿಕ್ಷಕರು ಹೀಗೆ ಒಂದೆರಡು ದಿನ ಪ್ರಯತ್ನಮಾಡಿ ನಂತರ ತಂಬಿಗೆ ತಾನೆ ಮೇಲೆ ಬರುತ್ತದೆ ಎಂದು ಹೇಳಿದರೆ "ಚಿಂತೆ ಮಾಡಬೇಡಿರಿ ಮಳೆಗಾಲ ಬರಲಿ ನೆಲ ಹಸಿಯಾಗುತ್ತದೆ ಆಗ ಸುತಾಳಿ ಎಳಿದರೆ ತಂಬಿಗೆ ಸಹಜವಾಗಿ ಬರುತ್ತದೆ" ಎಂದು ಒಬ್ಬ ರೈತ ಹೇಳುತ್ತಾನೆ ಅದಕ್ಕೆ ಮಳೆಗಾಲವನ್ನೇಕೆ ಕಾಯಬೇಕು ಈಗಲೇ ಒಂದರೆಡು ಬಕೇಟು ನೀರು ಮೆಲಿಂದ ಸುರಿದರೆ ಆಯಿತು ನೆಲ ಹಸಿಯಾಗಿ ಕೆಸರಾಗಿ ತಂಬಿಗೆ ಮೇಲೆ ಬರುತ್ತದೆ ಎಂದು ಹೈಸ್ಕೂಲ್ ವಿದ್ಯಾರ್ಥಿ ಹೇಳಿದಾಗ ಗಂಗಮ್ಮ ಅದನ್ನೂ ಮಾಡಿದಳು. ಆದರೆ ತಂಬಿಗೆ ಅಲುಗಾಡಲಿಲ್ಲ ಹೀಗೆ ಹಲವಾರು ಜನ ತಮಗೆ ತಿಳಿದಿದ್ದನ್ನೋ ಹೇಳಿ ಅವಳಿಗೆ ಸಮಾದಾನ ಮಾಡಲು ಪ್ರಯತ್ನಿಸುತ್ತಾರೆ. ಕೊನೆಗೆ ಈ ವಿಷಯ ಅಲ್ಲಿನ ಶಾಲಾ ವಿದ್ಯಾರ್ಥಿಗಳ ಗಮನಕ್ಕೆ ತಂದಾಗ ಗಂಗಮ್ಮ ನಮ್ಮ ಶಾಲೆ ಸಾರಿಸಲು ಹತ್ತು ಕೊಡ ನೀರು ಕೊಡುವುದಾದರೆ ನಾವು ಈ ತಂಬಿಗೆ ತೆಗೆದುಕೊಡುತ್ತೇವೆ ಎಂದು ಹೇಳಿ ಗಂಗಮ್ಮನೊಂದಿಗೆ ವಿಚಾರಿಸಿದಾಗ ತಾನು ಇಪ್ಪತ್ತು ಕೊಡ ನೀರು ಕೋಡುವುದಾಗಿ ಒಪ್ಪಿಕೊಳ್ಳುತ್ತಾಳೆ ಅದಕ್ಕೆ ಎಲ್ಲಾ ವಿದ್ಯಾರ್ಥಿಗಳು ಧ್ವನಿಗೂಡಿಸಿ ಶ್ರೀ ವೀರಭದ್ರೇಶ್ವರ ಮಹಾರಾಜಕಿ ಜೈ ಎಂದು ದೇವರ ಹೆಸರಿನಿಂದ ಸುತಾಳಿ ಮೇಲೆ ಎಳೆಯುತ್ತಾರೆ ಸುತಾಳಿ ಜೊತೆಗೆ ತಂಬಿಗೆಯು ಮೇಲೆ ಬಂದಿರುವುದನ್ನು ಕಂಡು ಗಂಗಮ್ಮ ತುಂಬಾ ಸಂತೋಷಗೊಂಡಳು ಅಷ್ಟರಲ್ಲಿ ದೇವರಿಗೆ ಹೋದ ಮಗ ಸೊಸೆ ತಿರುಗಿ ಬರುವಷ್ಟರಲ್ಲಿ ಎಲ್ಲಾ ಸಮಸ್ಯೆಯಿಂದ ಮುಕ್ತಿ ಕಂಡ ಗಂಗಮ್ಮ ಮಗ ಸೊಸೆಯೊಂದಿಗೆ ಬೋರನ್ನು ಪೂಜೆ ಮಾಡಿದರು ಆದರೆ ಪೂಜೆಗೆ ನೀರು ಎಲ್ಲಿಂದ ತಂದರು ಎಂಬುದನ್ನು ಮಗ ಮತ್ತು ಸೊಸೆಗೆ ಇನ್ನೂ ಯಾರು ಹೇಳಿಲ್ಲ. ಈ ಕಥೆಯ ಪ್ರಮುಖ ಉದ್ದೇಶ ಗಂಗಮ್ಮ ತೀವ್ರ ಕೊತೂಹಲದಿಂದ ಕೈಗೊಂಡ ಕಾರ್ಯ ಅವಳನ್ನೂ ಎಂಥಾ ಪೇಚಿಗೆ ಸಿಲುಕಿಸಿದೆ ಹಾಗೂ ಅವಸರವೇ ಅಪಾಯಕ್ಕೆ ಮೂಲ ಕಾರಣ ಎನ್ನುವ ಸಂಗತಿ ತಿಳಿಸಿಕೊಡುತ್ತದೆ.

**ಕಾಪಿಯ ಕಲೆ**

ಈ ಹಾಸ್ಯ ಪ್ರಬಂಧದಲ್ಲಿ ಬರುವ ಎರಡನೆಯ ಕಥೆ ಕಾಪಿಯ ಕಥೆ ಈ ಕಥೆಯಲ್ಲಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳು ಅಭ್ಯಾಸ ಮಾಡದೆ ಪರೀಕ್ಷೆ ಬರೆಯಲು ಹೋಗುವುದು ನಂತರ ಕಾಪಿ ಮಾಡುವುದನ್ನೆ ಒಂದು ಕಲೆಯಾಗಿ ರೂಢಿಸಿಕೊಂಡು ಪಾಸಾಗುವುದು ಈ ಕಥೆಯ ಉದ್ದೇಶವಾಗಿದೆ ಕಾಪಿ (ನಕಲು) ನೋಡುವುದು, ಕಾಪಿ ಮಾಡುವುದು, ಕಾಪಿ ಹೊಡೆಯುವುದು ಇವು ಗುಡ್ ಬೆಟರ್ ಬೆಸ್ಟ್ ಅಂದಂತೆ ಅಂದರೆ ಕಾಪಿ ಹೊಡೆಯುವುದರಲ್ಲೂ ಗ್ರೇಡ್‌ಗಳಿವೆ ಎಂದಂತಾಯ್ತು ಗ್ರೇಡ್ ಇದೆ ಅಂದಾಗ ಅದೊಂದು ಕಲೆ ಎಂದೇ ಹೇಳಬಹುದು ಎಂಬುದು ಕವಿಗಳ ಅನಿಸಿಕೆ.

ವಿದ್ಯಾರ್ಥಿಗಳು ಎಂದ ಮೇಲೆ ಕಾಪಿ ಇದ್ದದ್ದೆ ಬೇಂದ್ರೆ ಇದ್ದಲ್ಲಿ ಭಾವಗೀತೆ ಇದ್ದಂತೆ ಹಾಗೆಂದ ಮಾತ್ರಕ್ಕೆ ಎಲ್ಲಾ ವಿದ್ಯಾರ್ಥಿಗಳೂ ಕಾಪಿ ಮಾಡುತ್ತಾರಂತಲ್ಲ ಹಾಗಾದರೆ ಅವರೆಲ್ಲರ ಬಗ್ಗೆ ಬರೆಯಲು

ಇದೇನು ಮತದಾರರ ಯಾದಿ ಅಲ್ಲ ಕಾಪಿ ಒಂದು ಕಲೆಯಾಗಿರುವುದರಿಂದ ಅದು ಎಲ್ಲರಿಗೂ ಬರುವುದಿಲ್ಲ ಕೆಲವರೇ ಅದರಲ್ಲಿ ಚತುರರು. ಅಂಥಹವರ ಬಗ್ಗೆ ಬರೆಯುವುದೇ ಇಲ್ಲಿನ ಪ್ರಮುಖ ಉದ್ದೇಶವಾಗಿದೆ.

ಕಾಪಿ ಹೊಡೆಯುವವರು ವರ್ಷದ ಹನ್ನೆರಡು ತಿಂಗಳೂ ಬಿಜಿ ಇರುವುದಿಲ್ಲ ಅದಕ್ಕೂ ಕಾಲ ಇತಿ–ಮಿತಿ ’ ಇರುವುದನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿರುತ್ತಾರೆ. ವರ್ಷದಲ್ಲಿ ಕೇವಲ ಎರಡು ಸುಗ್ಗಿಗಳು ಬರುತ್ತವೇ ಅಂದರೆ ಪರೀಕ್ಷೆಗಳು ಹೊಸಬರಿಗೆ ಮಾರ್ಚ್ ಏಪ್ರಿಲ್ ತಿಂಗಳಾದರೆ, ಹಳಬರಿಗೆ ಅಕ್ಟೋಬರ್– ನವೆಂಬರ್ ಮಾರ್ಚ್ ಏಪ್ರಿಲ್‌ಗಿಂತ ಅಕ್ಟೋಬರ್ ನವೆಂಬರ್ ಕಾಪಿಕಾರರಿಗೆ ಹೇಳಿ ಮಾಡಿಸಿದ ಕಾಲ. ಈ ಕಾಲದಲ್ಲಿ ಎಲ್ಲರೂ ಹಳಬರು ಒಬ್ಬರಿಗೊಬ್ಬರು ಆಪಧ್ಭಾಂದವರು ಹೇಗಾದರೂ ಮಾಡಿ ಕಾಪಿ ಮಾಡಿ ಹೊಸಬರೊಂದಿಗೆ ಸೇರಬೇಕೆಂಬ ತವಕ ಎಲ್ಲರದು.

ಕಾಪಿ ಮಾಡುವ ಸನ್ನಿವೇಶ ಪ್ರಾರಂಭವಾಗುವುದು ಹೇಗೆ ಎಂಬುದರ ಸನ್ನಿವೇಶ ತುಂಬಾ ರೊಚಕವಾಗಿದೆ. ಗೆದ್ದಲುಗಳು ಹುತ್ತ ಕಟ್ಟಿದ್ದಂತೆ ಇವರ ಬರವಣಿಗೆ ಆರಂಭವಾಗುತ್ತದೆ. ವಿದ್ಯಾರ್ಥಿಗಳು ಬರೆಯುತ್ತಿದ್ದಾರೆಂದು ತಿಳಿದು ರೂಮ ಸೂಪರ್‌ವೈಜರ್ ಖುರ್ಚಿಗೆ ಕೂತರೆ ಹುಡುಗರಿಗೆ ಮಿರ್ಚಿ ಭರ್ಜಿ ತಿಂದಷ್ಟೇ ಸಂತಸ ಅವರು ನಿಧಾನವಾಗಿ ಮಿರ್ಚಿಗೆ ಅಲ್ಲ ಕಾಪಿಗೆ ಕೈ ಹಾಕುತ್ತಾರೆ. ಅಷ್ಟೆ ನಿಧಾನವಾಗಿ ಹೊರಗೆ ಎಳೆಯುತ್ತಾರೆ. ಅತ್ಯಂತ ಸೊಗಸಾಗಿ ಮಡಚಿ ಇಸ್ತ್ರೀ ಮಾಡಿದ ಮುಟ್ಟಕಾಪಿ ಎರಡೆ ಬೆರಳಲ್ಲಿ ಹಿಡಿದು ಚಲಾಯಿಸುತ್ತಾ ಮೂರು ಪುಟಗಳನ್ನು ತುಂಬಿಸಿ ಬಿಡುತ್ತಾರೆ ಇದು ಒಂದು ರೀತಿಯಲ್ಲಿ ಸರ್ಜನ್ ಮಾಡುವ ನಾಜೂಕು ಕೆಲಸ ಇವನೂ ಮುಂದೆ ಸರ್ಜನ್ ಆಗಬಹುದೇನೋ ಬರೆದಾದನಂತರ ಕಾಪಿ ಚೀಟಿ ಕಾಲಕಸ ಎಂದು ದಡ್ಡರು ಹೇಳುತ್ತಾರೆ ಅದನ್ನು ಎಸೆದು ಬಿಡುತ್ತಾರೆ. ಆದರೆ ಕಲಾವಿದರೂ ಅದನ್ನು ತೆಗೆದಂತೆ ನಿಧಾನವಾಗಿ  ಮೊದಲಿನ ಜಾಗಕ್ಕೆ ಸೇರಿಸುತ್ತಾರೆ. ಇಂಥವರು ಎಂದೂ ಸಿಕ್ಕು ಬೀಳುವುದಿಲ್ಲ ಯಾಕೆಂದರೆ ಪುರಾವೆಯೇ ಗಾಯಬ್!

ಒಂದು ಮೂಲೆಯಲ್ಲಿ ಒಬ್ಬ ಕುಳಿತ್ತಿದ್ದಾನೆ ದಡೋತಿ ವಿದ್ಯಾರ್ಥಿ ಮೂರು ತಾಸಾದರು ಭೂಕಂಪನವಾದರೂ ಏಳುವುದಿಲ್ಲ ಒಂದು ವೇಳೆ ಎದ್ದರೆ ಅವನ ಗಾಡಿ ನಡೆಯುವುದಿಲ್ಲ ಅವನನ್ನು ಎಬ್ಬಿಸಲು ರೂಮಸೂಪರ್‌ವೈಜರ್ ಹೇಳುತ್ತಾರೆ ಎದ್ದ ವಿದ್ಯಾರ್ಥಿ ನೇರವಾಗಿ ಮನೆಗೆ ಹೋಗುತ್ತಾನೆ ಎದ್ದ ನಂತರ ಅವನ ಸಿಟಿನ ಕೆಳಗೆ ಸುಮಾರು ಹತ್ತು ಪುಟಗಳ ಕಾಪಿ ಇತ್ತು.

ಈ ಕಾಪಿ ಮಾಡುವ ಕಲೆಯಲ್ಲಿ ವಿದ್ಯಾರ್ಥಿಗಳು ಕಂಡುಕೊಳ್ಳುವ ದಾರಿಗಳು ಹತ್ತು ಹಲವು ಪ್ರತಿಯೊಂದು ಪರೀಕ್ಷೆಯಲ್ಲಿ ಇಂಥ ವಿದ್ಯಾರ್ಥಿಗಳು ಸಾಕಷ್ಟ ಸಿಗುತ್ತಾರೆ ಇವರು ಕೇವಲ ಒಂದೇ ರೀತಿಯಾಗಿ ವಿಚಾರಿಸದೆ ಹತ್ತು ಹಲವು ಉಪಾಯಗಳಿಂದ ತಮ್ಮ ಕಾಪಿ ಕಲೆಯನ್ನು ಕರಗತ ಮಾಡಿಕೊಂಡು ತಮ್ಮ  ಕಾರ್ಯವನ್ನು ಸಾಧಿಸುತ್ತಾರೆ ಕೆಲವು ವಿದ್ಯಾರ್ಥಿಗಳು ಕಾಲೇಜಿನ ಜವಾನರನ್ನು ಬಳಸಿಕೊಂಡು ಹಣದ ಆಮಿಷ ತೋರಿಸಿ ತಮಗೆ ಚೀಟಿ ತಂದುಕೊಡಲು ಸ್ನೇಹ ಸಂಪಾದಿಸುತ್ತಾರೆ ಕೆಲವು ವಿದ್ಯಾರ್ಥಿಗಳು ತಮ್ಮ ಉಡುಪುಗಳಿಗೆ ಹಲವಾರು ಜೇಬುಗಳನ್ನು ಹೊಲೆಸಿ ಪರೀಕ್ಷೆಯಲ್ಲಿ ಕಾಪಿ ಮಾಡಲು ಹಲವಾರು ಉಡುಪುಗಳನ್ನು ಹೊಲಿಸಿಕೊಂಡಿರುತ್ತಾರೆ. ತಮ್ಮ ಬೂಟು ಸಾಕ್ಸ್ ಪಾದರಕ್ಷೆ ಯಾವುದನ್ನು ಲೆಕ್ಕಿಸದೆ ಹೇಗಾದರೂ ಮಾಡಿ ಕಾಪಿ ಮಾಡಿ ಯಶಸ್ವಿಯಾಗಿ ಉತೀರ್ಣವಾಗಬೇಕೆಂದು ಇವರ ಅಭಿಪ್ರಾಯ. ಪರೀಕ್ಷೆ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಆ ಕಡೆ ಈ ಕಡೆ ನೋಡುವುದು ನೋಡಿಯೂ ನೋಡದಂತೆ ನಟಿಸುವುದು ಸ್ವತಃ ಬರೆದಂತೆ ಮಾಡುವುದು ಕೆಲವರ

ಸ್ವಭಾವ ಕೆಲವರು ಕಾಪಿ ನೋಡುವುದರಲ್ಲೇ ಸಮಯ ಹಾಳು ಮಾಡಿ ಕೇವಲ ಒಂದೆ ಪ್ರಶ್ನೆಗೆ ಉತ್ತರ ಬರೆಯಲು ಸಮರ್ಥವಾಗಿ ಮತ್ತೆ ಅನುತ್ತೀರ್ಣರಾಗುವವರು ಇರುತ್ತಾರೆ. ಕೆಲವು ಹುಡುಗರು ಬಹಳ ನಿಷ್ಠೆಯಿಂದ ಪರೀಕ್ಷೆ ಬರೆಯುತ್ತಾರೆ ಎಂಬಂತೆ ತೋರುತ್ತಾರೆ ಹತ್ತಿರ ಹೋದಾಗ ಎದ್ದು ನಿಲ್ಲುವುದು ಸಣ್ಣದಾಗಿ ಸ್ಮೈಲ ಕೊಡುವುದು ಇವೆಲ್ಲ ಅವನಲ್ಲಿ ಖಂಡಿತ ಕಾಪಿ ಇದೆ ಎಂಬುದರ ಲಕ್ಷಣಗಳು ಆ ಕಡೆ ಈ ಕಡೆ ನೋಡುವುದು ನೋಡಿಯು ನೋಡದಂತೆ ನಟಿಸುವುದು ಸ್ವತಃ ಬರೆದಂತೆ ಮಾಡುವುದು ಇವೆಲ್ಲ ಇವರ ಸಾಮಾನ್ಯ ಲಕ್ಷಣಗಳು ಕೆಲವು ವಿದ್ಯಾರ್ಥಿಗಳು ಕೆಲವು ಸಲ ರೂಮ ಸುಪರ್ ವೈಜರನ್ನು ಹೆದರಿಸಿ ಅಂಜಿಸಿ ಕಾಪಿ ಮಾಡುತ್ತಾರೆ ಇವರು ಕೇವಲ ಒಬ್ಬರಾಗಿರದೆ ಇವರದು ಒಂದು ತಂಡವೆ ಇರುತ್ತದೆ. ಕಾಪಿ ಮಾಡವವರಿಗೆ ಯಾವ ವಸ್ತುಗಳು ಸಾಲುವುದಿಲ್ಲ. ಪರೀಕ್ಷೆ ರಟ್ಟು (ಪ್ಯಾಡ್), ಅಂಗೈ, ಬಟ್ಟೆಯಮೇಲೆ, ದಸ್ತಿಯ ಮೇಲೆ ಹೀಗೆ ಹಲವಾರು ಸ್ಥಳಗಳು ಇವರಿಗೆ ಅವಶ್ಯಕ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಸಮಯದಲ್ಲಿ ಸ್ಕ್ವ್ಯಾಡನ ಕೈಗೆ ಸಿಕ್ಕಿ ಬೀಳುವುದು ಅವರು ಬಂದು ತಪಾಸಣೆ ಮಾಡಿದಾಗ ತಮ್ಮ ಹತ್ತಿರ ಇರುವ ಚಿಟ್ಟಿಗಳನ್ನು ಲಡ್ಡು ತಿಂದಂತೆ ಉಂಡೆಮಾಡಿ ತಿನ್ನುವುದು ಇವೆಲ್ಲ ಸಂಗತಿಗಳು ಸಾಕ್ಷತ ನೋಡಿದ ಸಂಗತಿಗಳು. ಕೇವಲ ಹುಡುಗರು ಮಾತ್ರ ಕಾಪಿ ಮಾಡುತ್ತಾರೆ ವಿದ್ಯಾರ್ಥಿನಿಯರು ಅಂಥ ಕೆಲಸಕ್ಕೆ ಕೈ ಹಾಕುವವರಲ್ಲ ಎಂದೆನ್ನುವಂತಿಲ್ಲ ಇದರಲ್ಲಿ ಸ್ತ್ರೀಯರು ಕಾಪಿ ಮಾಡಲು ಹಲವಾರು ಮಾರ್ಗಗಳನ್ನು ಬಳಸಿಕೊಂಡು ನಾವು ಕಾಪಿ ಮಾಡುವುದರಲ್ಲಿ ಯಾರಿಗೂ ಕಮ್ಮಿ ಇಲ್ಲ ಎನ್ನುವಂತೆ ಕಾಪಿ ಮಾಡಿ ಉತ್ತೀರ್ಣರಾಗುತ್ತಾರೆ ಒಟ್ಟಿನಲ್ಲಿ ಹೇಳುವುದಾದರೆ ಕಾಪಿ ಮಾಡುವುದು ಒಂದು ಕಲೆಯನ್ನಾಗಿ ಮಾಡಿಕೊಂಡು ಹಲವಾರು ಸಂರ್ಭಗಳಲ್ಲಿ ಅನೇಕ ಕ್ಲೀಷ್ಟಕರ ಸನ್ನಿವೇಶವನ್ನು ಎದುರಿಸಿ ಜಯಶಾಲಿಗಳಾಗಿ ಹೊರಬರುತ್ತಾರೆ ಹುಡುಗಿಯರು ಕಾಪಿ ಇಡುವ ಜಾಗಗಳಿಗೆ ನಾವು ಹೋಗುವುದಿಲ್ಲ, ಹೋಗಬಾರದು ಕಾಪಿ ಹಿಡಿಯಲು ಕೈ ಸಾಬೂತು ಇರಬೇಕಾದರೆ ಒಮ್ಮೆ ಒಂದು ಹುಡುಗಿಯು ಪರೀಕ್ಷೆಗೆ ಕುಳಿತಿದ್ದಳು ನಾರ್ಮಲ್‌ಗಿಂತ ಅವಳ ಹೊಟ್ಟೆ ದೊಡ್ಡದು ಎಂದು ನನಗೆ ಅನಿಸಿತು ಬಸುರಿ ಇರಬಹುದೆಂದು ಕನಿಕರದಿಂದ ಕೊರಳು ನೋಡಿದೆ ತಾಳಿ ಇರಲಿಲ್ಲ ಇದೇನು ಒಗಟು ತಿಳಿಯಲಿಲ್ಲ ಇಲ್ಲದ ಉಸಾಬರಿ ನನಗೇಕೆ ಎಂದು ಸುಮ್ಮನಿರಲಿಲ್ಲ ಲೇಡಿಸ್ಟಾಫಿಗೆ ಕರೆದು ಚೆಕ್ ಮಾಡಿಸಿದೆ ಹೊಟ್ಟೆಯಿಂದ ಪೂರ್ಣ ಗೈಡ್ ಹೊರಗೆ ಬಂತು ಅದರ ಜೊತೆ ಅವಳು ಹೊರಗೆ ಹೋದಳೆಂದು ಬೇರೆ ಹೇಳಬೇಕಾಗಿಲ್ಲವಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹೀಗೆ ಈ ಕಾಪಿ ಕಲೆಯಲ್ಲಿ ವಿದ್ಯಾರ್ಥಿ ವಿದ್ಯಾಥಿನಿಯರ ಅನೇಕ ಸನ್ನಿವೇಶಗಳು ಪ್ರಬಂಧದಲ್ಲಿ ಕಂಡುಬರುತ್ತವೆ.

ಈ ಗಂಗಮ್ಮನ ಬೋರ್‌ವೆಲ್ ಪ್ರಕರಣದಲ್ಲಿ ಒಟ್ಟು ಹನ್ನೊಂದು ಹಾಸ್ಯ ಲೇಖನಗಳಿದ್ದು ಇಲ್ಲಿ ಕೇವಲ ಎರಡು ಹಾಸ್ಯ ಕಥೆಗಳನ್ನು ಆಯ್ದುಕೊಂಡಿರುತ್ತೇನೆ ಹಾಗೂ ಈ ಹಾಸ್ಯ ಪ್ರಬಂಧದಲ್ಲಿರುವ ಎಲ್ಲ ಕಥೆಗಳು ವಿಭಿನ್ನವಾಗಿದ್ದು ಜೀವನಕ್ಕೆ ಸಂಬಂಧಿಸಿದ ಅನೇಕ ವಿಷಯಗಳು ಇಲ್ಲಿ ಕಂಡು ಬರುತ್ತವೆ ಎಂದು ಹೇಳಬಹುದಾಗಿದೆ.

**ಪರಮರ್ಶನ ಗ್ರಂಥಗಳು**


- ಪೂಜಾರಿ ಬಿ.ಬಿ. (2011). *ಗಂಗಮ್ಮನ ಬೋರ್ ಪ್ರಕರಣ.* ಕನ್ನಡನಾಡು ಪ್ರಕಾಶನ.
- ಶೇಷಗಿರಿರಾವ್ ಎಲ್ ಎಸ್. (2006). *ಹೊಸಗನ್ನಡ ಸಾಹಿತ್ಯ ಚರಿತ್ರೆ.* ಅಂಕಿತ ಪ್ರಕಾಶನ
- ಮುಗುಳಿ–ಕನ್ನಡ ರಂ. ಶ್ರೀ. (2011). *ಸಾಹಿತ್ಯ ಚರಿತ್ರೆ.* ಗೀತಾ ಬುಕ್ ಹೌಸ್.